SRI DEVARAJ URS ACADEMY OF HIGHER EDUCATION & RESEARCH

SRI DEVARAJ URS MEDICAL COLLEGE

Tamaka, Kolar

SDUAHER

UNIVERSITY LIBRARY & LEARNING RESOURCE CENTRE

Online Newspaper Clipping Service

**Dated, Wednesday, 22nd June– 2017** **Pg.No.03**

ಸಂಯುಕ್ತ ಕರ್ನಾಟಕ

# ಖಾಸಗಿ ಆಸ್ಪತ್ರೆ: ಏಕರೂಪ ದರ ನಿಗದಿ

ಬೆಂಗಳೂರು: ಖಾಸಗಿ ಆಸ್ಪತ್ರೆಯಲ್ಲಿ ನೀಡುವ ಚಿಕಿತ್ಸೆಗೆ ಏಕರೂಪದ ದರ ನಿಗದಿ ಮಾಡಬೇಕಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಕೆ.ಆರ್. ರಮೇಶ್‌ಕುಮಾರ್ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಯೋಜಿಸಿದ್ದ 'ಆರೋಗ್ಯ ಮತ್ತು ಪ್ರವಾಸೋದ್ಯಮದಲ್ಲಿ ಯೋಗ' ಕುರಿತು ನಡೆದ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಖಾಸಗಿ ಆಸ್ಪತ್ರೆಯಲ್ಲಿ ನೀಡುವ ಚಿಕಿತ್ಸೆ ದುಬಾರಿಯಾಗಿದ್ದು, ಸಾಮಾನ್ಯ ಜನರಿಗೆ ಚಿಕಿತ್ಸೆ ಪಡೆಯಲು ದುಸ್ತರವಾಗಿದೆ. ಈ ಕಾರಣದಿಂದ 'ತಜ್ಞರ ಸಮಿತಿ' ರಚಿಸಿ, ಚರ್ಚಿಸಿ ಒಂದು ದರ ನಿಗದಿ ಪಡಿಸುವ ಮಸೂದೆ ಮಂಡಿಸಿದ್ದು, ಅದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಗಿದೆ. ಆದರೆ ಸೂಕ್ತ ಬೆಂಬಲ ಮಸೂದೆಗೆ ಸಿಗುತ್ತಿಲ್ಲ. ಹಾಗಾಗಿ ಪ್ರತ್ಯೇಕ ಸಮಿತಿ ರಚಿಸಿ, ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಬೇಕಿದೆ ಎಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರೆ, ಇಂಜೆಕ್ಷನ್, ವಿವಿಧ ಪರೀಕ್ಷೆಗಳಿಗೆ ದರ ನಿಗದಿ, ವೈದ್ಯರ ಶುಲ್ಕ ಸೇರಿದಂತೆ ಯಾವುದಕ್ಕೂ ಸರಿಯಾದ ನೀತಿಸಂಹಿತೆ ಇಲ್ಲ. ಆಸ್ಪತ್ರೆಗಳು ಮನುಷ್ಯತ್ವವನ್ನೇ ಕಳೆದುಕೊಂಡಿವೆ. ಆಸ್ಪತ್ರೆಯಲ್ಲಿ ರೋಗಿ ಮೃತಪಟ್ಟರೆ 'ಹಣ ಕೊಟ್ಟು ಹೆಣ ತೆಗೆದುಕೊಂಡು' ಹೋಗು ಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರವಾಸೋದ್ಯಮ ಸಮಿತಿಯ ಅಧ್ಯಕ್ಷ ಡಾ.ಬಿ. ಅಮರನಾಥ್ ಮಾತನಾಡಿದರು. ಯೋಗದಲ್ಲಿ ಖ್ಯಾತಿ ಪಡೆದಿರುವ ಡಾ.ಆರ್. ನಾಗರತ್ನ, ಪ್ರೊ.ಆರ್.ವೆಂಕಟರಾಮ್, ಪ್ರೊ.ಎನ್.ವಿ. ರಘುರಾಮ್, ಡಾ.ಸುಧೀರ್ ದೇಶಪಾಂಡೆ, ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಸಿ.ದಿನೇಶ್, ರೋಟರಿಯನ್ ಆಶಾ ಪ್ರಸನ್ನ ಕುಮಾರ್ ಮತ್ತಿತರಿದ್ದರು.

www.ideacellular.com
ನಮಗೆ ಕಾಳಜಿಯಿದೆ
ಸರ್ವೀಸ್ ರೀತಿ